(183)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಯತೀಂದ್ರ ಎಸ್ ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ: 183 ಕರಡು ಉತ್ತರ**

**ಸೂಚನೆ:**

ರಾಜ್ಯ ಸರ್ಕಾರವು ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಶೇ.10% ರಷ್ಟು ಪ್ಲಾಟ್ ಗಳನ್ನು ಮೀಸಲಿರಿಸಿದ್ದು, ಸದರಿ ಮೀಸಲಾತಿಯಡಿ ನೀಡುವ ಪ್ಲಾಟ್ ಗಳನ್ನು ಪಡೆಯಲು ಹಿಂದುಳಿದ ವರ್ಗಗಳ ಉದ್ಯಮಿಗಳ ನಿರಾಸಕ್ತಿ ತೋರುತ್ತಿರುವುದರಿಂದ, ಈ ಹಿಂದಿನಂತೆ ಹಿಂದುಳಿದ ವರ್ಗಗಳ ಉದ್ಯಮಿಗಳು ಖರೀದಿ ಮಾಡುವ ಪ್ಲಾಟ್ ಗಳ ಒಟ್ಟು ಮೊತ್ತದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಿ ಸದರಿ ಸಮಸ್ಯೆಯನ್ನು ಪರಿಹರಿಸುವಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸರ್ಕಾರದ ಆದೇಶ ಸಂಖ್ಯೆ:ಸಿಐ 82 ಸಿ.ಎಸ್.ಸಿ. 2016 ಬೆಂಗಳೂರು ದಿನಾಂಕ:05-05-2016 ರಲ್ಲಿ ಮಂಡಳಿಯು ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ-1 ಮತ್ತು 2ಎ), ವಿಕಲಚೇತನ ಹಾಗೂ ಮಾಜಿ ಸೈನಿಕ ಉದ್ದಿಮೆದಾರರಿಗೆ ಒಟ್ಟಾರೆಯಾಗಿ ಕನಿಷ್ಠ ಶೇ.10 ರಷ್ಟು ನಿವೇಶನಗಳನ್ನು ಮೀಸಲಿಡಲು ಆದೇಶಿಸಿದ್ದು, ಸದರಿ ಆದೇಶದನ್ವಯ, ಮಂಡಳಿಯು ಅಭಿವೃದ್ಧಿಪಡಿಸುತ್ತಿರುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ, ಈ ವರ್ಗದವರಿಗೆ ಶೇ.10 ರಷ್ಟು ನಿವೇಶನಗಳನ್ನು ಮೀಸಲಿಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಐ 113 ಎಸ್.ಪಿ.ಐ 2017 ದಿನಾಂಕ:28-12-2017 ರಲ್ಲಿ, ಕೆಐಎಡಿಬಿ /ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳಿಂದ ಹಿಂದುಳಿದ ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ರವರಿಗೆ ಮಂಜೂರು/ಹಂಚಿಕೆ ಮಾಡಲಾಗುವ ಪ್ಲಾಟ್/ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲು ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ರಿಯಾಯಿತಿಯನ್ನು 1 ಎಕರೆಗೆ ಮತ್ತು ಇತರೆ ಜಿಲ್ಲೆಗಳಲ್ಲಿ 2 ಎಕರೆಗೆ ಸೀಮಿತಗೊಳಿಸಿರುತ್ತದೆ. ಸದರಿ ಸರ್ಕಾರಿ ಆದೇಶದನ್ವಯ ಈ ಹಿಂದೆ ಶೇ.25 ರಷ್ಟು ರಿಯಾಯಿತಿ ನೀಡಿ ಹಂಚಿಕೆ ಮಾಡಲಾಗಿರುತ್ತದೆ.

ದಿನಾಂಕ:05-09-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಆರ್ಥಿಕ ಇಲಾಖೆಯು ಹಿಂದುಳಿದ ವರ್ಗಗಳಿಗೆ ಕೆಐಎಡಿಬಿ.ಯು ಶೇ.25 ರಷ್ಟು ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಯೋಜನೆಗೆ ಅನುದಾನ ಬಿಡುಗಡೆ ಮಾಡದ ಕಾರಣ, ಸರ್ಕಾರವು ಅನುದಾನ ಬಿಡುಗಡೆ ಮಾಡುವವರೆಗೂ ಮಂಡಳಿ ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ.

ಅದರನ್ವಯ, ಸದರಿ ಯೋಜನೆಯಡಿ ಹಿಂದುಳಿದ ವರ್ಗಗಳಿಗೆ ಮಂಡಳಿಯು ನಿವೇಶನಗಳ ಹಂಚಿಕೆ ಮಾಡುವ ಒಟ್ಟು ಮೊತ್ತದ ಶೇ.25 ರಷ್ಟು ರಿಯಾಯಿತಿ ನೀಡುವುದನ್ನು ಸ್ಥಗಿತಗೊಳಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ದಿನಾಂಕ:08-09-2022 ರಂದು ಸುತ್ತೋಲೆ ಹೊರಡಿಸಲಾಗಿದೆ.

2017-18, 2018-19, 2019-20 ಹಾಗೂ 2020-21ನೇ ಸಾಲಿನವರೆಗೆ 169 ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ 125.59 ಎಕರೆ ಜಮೀನು ಹಂಚಿಕೆ ಮಾಡಿ ರೂ.28.98 ಕೋಟಿ ರಿಯಾಯಿತಿ ನೀಡಿರುವ ಮೊತ್ತಕ್ಕೆ ಅನುದಾನ ಬಿಡುಗಡೆ ಮಾಡಲು ಕೆಐಎಡಿಬಿಯು ಸರ್ಕಾರಕ್ಕೆ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಆದರೆ, ಆರ್ಥಿಕ ಇಲಾಖೆಯು ಇಲ್ಲಿಯವರೆಗೆ ಹಿಂದುಳಿದ ವರ್ಗದವರಿಗೆ ವಿಸ್ತರಿಸಿದ ಶೇ. 25%ರ ರಿಯಾಯಿತಿ ಮೊತ್ತವನ್ನು ಇನ್ನೂ ಕೆಐಎಡಿಬಿಗೆ ಬಿಡುಗಡೆ ಮಾಡಿರುವುದಿಲ್ಲ.

**ಸಂಖ್ಯೆ: ಸಿಐ 199 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.